ಅಧ್ಯಕ್ಷರು :— ಮಂಡಿಸಲಾಯಿತು. ಇನ್ನು ಶೂನ್ಯ ವೇಳೆ.

(3) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

(ಅ) ಲೋಕಾಯುಕ್ತಕ್ಕೆ ಕೋಲಾರ ಮುನಿಸಿಪಾಲಿಟಿಯವರು ದಿ: 17-1-99ರಂದು ವರದಿ ಕಳಿಸಿಕೊಟ್ಟಿರುವುದು.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್.) :— ಮಾನ್ಯ ಅಧ್ಯಕ್ಷರೆ, ಲೋಕಾಯುಕ್ತಕ್ಕೆ ಕೋಲಾರ ಮುನಿಸಿಪಾಲಿಟಿಯವರು ದಿನಾಂಕ: 17-1-1998 ರಂದು ವರದಿ ಕಳಿಸಿಕೊಟ್ಟಿದ್ದಾರೆ. ಇದಾಗಿ ಸುಮಾರು ಒಂದೂವರೆ ವರ್ಷಗಳಾಗಿದೆ. ದೂರು ಕೊಟ್ಟಿರುವವನು ನಾನು, ಮುನಿಸಿಪಾಲಿಟಿಯನ್ನು ಸೂಪರ್‌ಸೀಡ್ ಮಾಡಿದರು; ನಾನು ದೂರು ಕೊಟ್ಟಿರುವುದರಿಂದ ನನಗೆ ಸಮನ್ಸ್ ಕಳಿಸಿ ಇನ್‌ವೆಸ್ಟಿಗೇಷನ್‌ಗೆ ಬರಬೇಕೆಂದು ನೋಟೀಸ್ ಕೊಟ್ಟಿದ್ದಾರೆ. As a responsible Legislator I attended there. I have given all my investigation report to them. More than one and half a years has elapsed even now till this date the Government has not taken any interest about this Lokayukta Report. ಕಲ್‌ಪ್ರಿಟ್ಸ್‌ಗಳನ್ನು ಊರಿನಲ್ಲಿ ಬಿಟ್ಟು ಒಳ್ಳೆಯ ಕೆಲಸ ಮಾಡುತ್ತಿರುವ ನಮ್ಮನ್ನೆಲ್ಲ ವಿಚಾರಣೆಗೆ ಕರೆಯುತ್ತಿರುವ ಈ ಸರ್ಕಾರ can't they bring the report and submit in this House? ಅದರ ಬಗ್ಗೆ ಉತ್ತರ ಕೊಡಲು ಇಲ್ಲಿ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಇಲ್ಲ.

ಅಧ್ಯಕ್ಷರು :— ಮಾನ್ಯ ಕಾನೂನು ಸಚಿವರು ಇದ್ದಾರೆ. ತಾವು ಹೇಳಿ.

SRI. S. RAJENDRAN :— Government is not at all taking any interest to initiate action against the culprit and to bookl him,.. ಅವರಿಗೆ ಅವಕಾಶ ಕೊಡಲು 'ಇವರು' ನಿಧಾನಮಾಡುತ್ತಿದ್ದಾರೆಯೇ? ಆ ವರದಿ ಏನಾಗಿದೆ? ಮುನಿಸಿಪಾಲಿಟಿಯಲ್ಲಿ ತಪ್ಪು ಮಾಡಿರುವುದರಿಂದ ಅದನ್ನು ಸೂಪರ್‌ಸೀಡ್ ಮಾಡಿರುವ ತಾವು, ಅದರ ಮೇಲೆ ಲೋಕಾಯುಕ್ತಕ್ಕೆ ವರದಿ ಕೋರಿ ಕಳಿಸಿದ್ದಿರಿ, till this time you have not taken any action. Where it stands? Kindly give me the answer..

SRI M.C. NANAIAH :— I must verify whether the Lokayukta has given the Report to the Government. Whether Government has any information about that. If the Lokayukta has sent the report to the Government, I will check it up and come to this House....

ಶ್ರೀ ಎಸ್. ರಾಜೇಂದ್ರನ್ :— ಮಾನ್ಯ ಅಧ್ಯಕ್ಷರೆ, ಅವರು ವರದಿಯನ್ನು ಕೊಡುತ್ತಾರೋ ಇಲ್ಲವೋ ಎಂಬ ಬಗ್ಗೆ ಇವರು ಕಾಯುವ ಅಗತ್ಯವಿಲ್ಲ.

ಅಧ್ಯಕ್ಷರು :— ಹಾಗಲ್ಲ, ತಾವು ಯುವಕರಿದ್ದೀರಿ. ಲೋಕಾಯುಕ್ತದವರು ವಿಚಾರಣೆಯೆಲ್ಲಾ ಮಾಡಿದ ಮೇಲೆ ಫೈಂಡಿಂಗ್ಸ್ ಏನು ಎಂಬ ಬಗ್ಗೆ ಸರ್ಕಾರಕ್ಕೆ ತಿಳಿಸಬೇಕಾಗುತ್ತದೆ. ಮತ್ತು ಕ್ರಮ ತೆಗೆದುಕೊಳ್ಳಿ ಎಂದು ಹೇಳಬೇಕಾಗುತ್ತದೆ. ಆ ರೀತಿ ವರದಿ ಬಂದಿದೆಯೇ, ಇಲ್ಲವೋ, ವರದಿಯು ಯಾವ ಹಂತದಲ್ಲಿದೆ ಮುಂತಾಗಿ ಎಲ್ಲ ಮಾಹಿತಿಯನ್ನು ಪಡೆದು ಸದನಕ್ಕೆ ತಿಳಿಸುವುದಾಗಿ ಅವರು ಹೇಳಿದ್ದಾರೆ.

ಶ್ರೀ ಎಸ್. ರಾಜೇಂದ್ರನ್ :— ಮಾನ್ಯ ಅಧ್ಯಕ್ಷರೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. I have brought this to the notice of the Government several times and I went there also. Inspite of that Government has not taken any interest. ಇದಕ್ಕೆ ಅವರು ಉತ್ತರ ಕೊಡಲಿ. ಅವರು ಈ ರೀತಿ ಉತ್ತರ ಕೊಟ್ಟರೆ ನಾನು ಮತ್ತೆ ಅಲ್ಲಿಗೆ ಹೇಗೆ ಹೋಗಲಿ?

ಅಧ್ಯಕ್ಷರು :— ತಾವು ಅವರ ಹತ್ತಿರ ಹೋಗಿ ಹೇಳುವ ಬದಲಾಗಿ ನನ್ನ ಹತ್ತಿರ ಬಂದಿದ್ದರೆ ಚೆನ್ನಾಗಿತ್ತು. Today you have raised it here. We will see that information is given to the House....

ಶ್ರೀ ಎಸ್. ರಾಜೇಂದ್ರನ್ :— ಅದನ್ನು ಎಷ್ಟು ದಿವಸಗಳಲ್ಲಿ ಮಾಡುತ್ತಾರೆ?

ಅಧ್ಯಕ್ಷರು :— ಎರಡು ದಿವಸಗಳಲ್ಲಿ.

SRI M.C. NANAIHA :— If the report received at the Government level I will come to the House. If the report is not received I cannot compel them to give it to the Government. I will pass on the information. I will speak to you tomorrow.

SRI. S. RAJENDRAN :— You cannot compel them, you cannot force them to given the report then what is the remedy? kindly tell me.

SRI. M.C. NANAIAH :— Well, I think I will discuss with you.

ಶ್ರೀ ಎಸ್. ರಾಜೇಂದ್ರನ್ :— ನಾನು ಅಲ್ಲಿಗೆ ಹೋಗಿ ಮತ್ತೆ ಒತ್ತಾಯ ಮಾಡಬೇಕೆ? ನಾನು ಅಮೇರಿಕಾಗೆ ಹೋಗಿ ಹೇಳಲು ಆಗುತ್ತದೆಯೇ? Is it not their duty to send the Report? Can he not instruct the Lokayukta? ನಾನು ಹೋಗಿ ಕೇಳಲು ಆಗಲಿಲ್ಲವೆಂದರೆ ಮತ್ತೆ ಯಾರು ಹೋಗಿ ಕೇಳಲು ಆಗುತ್ತದೆ ಹೇಳಿ.

Mr. SPEAKER: What he means whatever be the nature of complaint, the Lokayukta have to conduct an enquiry and give a finding....

ಶ್ರೀ ಎಂ.ಸಿ. ನಾಣಯ್ಯ :— ಮಾನ್ಯ ಅಧ್ಯಕ್ಷರೆ, ಈ ವಿಚಾರದ ಬಗ್ಗೆ ತನಿಖೆ ಮಾಡಿ ವರದಿ ಕೊಡಬೇಕೆಂದು ಲೋಕಾಯುಕ್ತಕ್ಕೆ ಅದು ಹೋಗಿದೆ. ಲೋಕಾಯುಕ್ತದಿಂದ ಸರ್ಕಾರಕ್ಕೆ ವರದಿ ಬಂದಿದ್ದರೆ ಮತ್ತು ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎಂಬ ಬಗ್ಗೆ ಈ ಸದನಕ್ಕೆ ತಿಳಿಸುತ್ತೇನೆ. ಲೋಕಾಯುಕ್ತದಿಂದ ವರದಿ ಬಾರದಿದ್ದರೆ ಲೋಕಾಯುಕ್ತದಲ್ಲಿ ಯಾರು ರಿಜಿಸ್ಟ್ರಾರ್ ಹಂತದಲ್ಲಿ ಅಧಿಕಾರಿಗಳು ಇದ್ದಾರೆ ಅವರ ಬಳಿ ಸಂಪರ್ಕ ಮಾಡಿ ಇದು ಯಾವ ಹಂತದಲ್ಲಿದೆ ಎಂಬ ಬಗ್ಗೆ ಈ ಸದನಕ್ಕೆ ವಿಚಾರವನ್ನು ತಿಳಿಸಲು ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್. ರಾಜೇಂದ್ರನ್ :— ಸರ್ಕಾರವೇ ಇದರ ಬಗ್ಗೆ ಲೋಕಾಯುಕ್ತ ತನಿಖೆಗೆ ಕಳಿಸಿರುವುದು. For your kind information, the Government only has referred this to Lokayukta to conduct an enquiry. ಆ ರೀತಿ ಸರ್ಕಾರವೇ ಅವರಿಗೆ ಈ ಕಾರ್ಯ ವಹಿಸಿದ್ದರೂ ಇನ್ನೂ ಲೋಕಾಯುಕ್ತದವರು ವರದಿ ಕೊಟ್ಟಿಲ್ಲವೆಂದು ಅವರು ಹೇಳಿದರೆ ನಾನು ಏನು ಮಾಡಲು ಆಗುತ್ತದೆ? You see fate of a legislator. What sort of reply I am receiving from the Government. ಈ ಸರ್ಕಾರ ಸತ್ತು ಹೋಗುವ ಸಂದರ್ಭದಲ್ಲಿ 'ಶಂಕರ', 'ಶಂಕರ' ಎಂದು ಹೇಳಿದರೆ, ತಾವು ಎಲ್ಲಿಂದ ವರದಿ ಕೊಡಲು ಆಗುತ್ತದೆ

SRI M.C. NANAIAH :— Kindly hear me. Lokayukta is an independent, autonomous body and the Government can only seek the information.

ಅಧ್ಯಕ್ಷರು :— ನೀವು ಹೊಸಬರು ಇದ್ದೀರಿ. ರಾಜ್ಯ ಸಭೆಯ ಚುನಾವಣೆಯಲ್ಲಿ ಓಟನ್ನು ಹಾಕಲು ಹೋದಾಗ, ಶ್ರೀ ವಾಟಾಳ್ ನಾಗರಾಜ್ ಮತ್ತು ಇತರರಿಗೆ ತಾವು ಕೇಳಿದ್ದರೆ ಆ ಓಟಿನ ಬೆಲೆ ಏನು, ಹೇಗೆ ಅದನ್ನು ಉಪಯೋಗ ಮಾಡಿಕೊಳ್ಳಬೇಕು, ಆಡಳಿತ ಪಕ್ಷದವರನ್ನು ಹೇಗೆ ಬಗ್ಗಿಸಬೇಕು, ಹೇಗೆ ಕೆಲಸ ಮಾಡಿಸಿಕೊಳ್ಳಬೇಕು ಎಂಬುದು ಗೊತ್ತಾಗುತ್ತದೆ. ಆದರೆ ತಾವು ಸೀದ ಅವರ ಹತ್ತಿರ ಹೋಗಿ ಓಟ್ ಹಾಕಿಬಿಟ್ಟಿದ್ದೀರಿ, ಇವತ್ತು ಒದ್ದಾಡುತ್ತಿದ್ದೀರಿ. ತಮ್ಮ ಸಮಸ್ಯೆ ಶ್ರೀ ವಾಟಾಳ್‌ರವರಿಗೆ ಬರುತ್ತದೆಯೆ? ತಾವು ಇನ್ನು ಮುಂದೆ ಮಾನ್ಯ ವಾಟಾಳ್‌ರ ಸಲಹೆಯನ್ನು ಪಡೆದುಕೊಳ್ಳಿ.

SRI. S. RAJENDRAN :— Atleast if I cannot believe this Government...

ಶ್ರೀ ವಾಟಾಳ್ ನಾಗರಾಜ್ :— ತಾವು ಹೇಳಿದ್ದು ನನಗೆ ಅರ್ಥವಾಗಲಿಲ್ಲ.

ಅಧ್ಯಕ್ಷರು :— ಇನ್ನು ಮುಂದಕ್ಕೆ ಶ್ರೀ ವಾಟಾಳ್‌ರ ಸಲಹೆ ಪಡೆದುಕೊಳ್ಳಿ. ಸರ್ಕಾರಕ್ಕೆ ಕೆಲವು ಸನ್ನಿವೇಶಗಳಲ್ಲಿ ಅವರು ಸಹಾಯ ಮಾಡುತ್ತಾರೆ. ಇವರು ಸಹಾಯ ಮಾಡುವಾಗ ಗಟ್ಟಿಯಾಗಿ ಹೇಳಬೇಕು, ಇದು ನನ್ನ ಕ್ಷೇತ್ರದ ಕೆಲಸ, ಹಾಗೂ ನನ್ನ ಗೌರವದ ಪ್ರಶ್ನೆ ಕೂಡ ಹೌದು ಎಂದು ಹೇಳಬೇಕು. ಮಾನ್ಯ ವಾಟಾಳ್‌ರವರೆ, ಅವರು ಈ ಸದನದಲ್ಲಿ ಹೊಸಬರಾಗಿರುವುದರಿಂದ ಅವರಿಗೆ ಗೊತ್ತಾಗಲಿಲ್ಲ, ಅವರ ಹಿಂದೆ ಹೋಗಿ ಓಟ್ ಹಾಕಿಬಿಟ್ಟರು. ನೀವು ಅವರಿಗೆ ಗೈಡೆನ್ಸ್ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ :— ನಾವೆಲ್ಲಾ ನಿಮ್ಮನ್ನು ಅಧ್ಯಕ್ಷರನ್ನಾಗಿ ಮಾಡಿಕೊಂಡಿದ್ದೇವೆ.

ಶ್ರೀ ಎಂ.ಸಿ. ನಾಣಯ್ಯ :— ?

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) :— ಮಾನ್ಯ ಅಧ್ಯಕ್ಷರೆ, ನಾನು ಈ ಪುರಸಭೆ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇನೆ, ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಸದನದಲ್ಲಿ ಇಲ್ಲ, ಇದನ್ನು ಇಲ್ಲಿ, ಈಗ ಪ್ರಸ್ತಾಪ ಮಾಡಬೇಕಾ ಅಥವಾ ಬೇಡವಾ?

ಅಧ್ಯಕ್ಷರು :— ಶೂನ್ಯ ವೇಳೆಯಲ್ಲಿ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಇರಲೇಬೇಕೆಂದು ಏನೂ ಇಲ್ಲ. ಅವರು ಇದ್ದರೆ ಒಳ್ಳೆಯದು. ಸರ್ಕಾರದವರು ಉತ್ತರ ಕೊಡುತ್ತಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಈ ಸದನ ನಡೆಯುವಾಗ ಅವರು ಎಲ್ಲಿರಬೇಕು? ಅವರು ಈ ಮನೆಯಲ್ಲಿರಬೇಕು, ಇಲ್ಲ ಆ ಮನೆಯಲ್ಲಿರಬೇಕು.

ಶ್ರೀ ವಾಟಾಳ್ ನಾಗರಾಜ್ :— ಶೂನ್ಯ ವೇಳೆಯಲ್ಲಿ ಮಾನ್ಯ ಮಂತ್ರಿಗಳು ಇರಲೇಬೇಕೆಂದು ಏನೂ ಇಲ್ಲ. ಏಕೆಂದರೆ, ಸರ್ಕಾರವೇ ಶೂನ್ಯವಾಗಿದೆ.

SRI M.C. NANAIAH :— Instructions have been given to findout at what stage, the matter is. You please see how fast we are.

MR. SPEAKER :— I am proud of you so much.

(ಅ) ಸಕಲೇಶಪುರ ಪುರಸಭೆಯಲ್ಲಿ ಕುರ್ಚಿ ಮೇಜೆ ತರುವುದರಲ್ಲಿ ಅವ್ಯವಹಾರ.

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) :— ಮಾನ್ಯ ಅಧ್ಯಕ್ಷರೆ, ಸಕಲೇಶಪುರ ಪುರಸಭೆ ರಿನೋವೇಷನ್ ಬಗ್ಗೆ ಕುರ್ಚಿ ಮೇಜೆ ತರುವುದರಲ್ಲಿ ಅವ್ಯವಹಾರವಾಗಿದೆಯೇ ಎಂದು ನಾನು ಪ್ರಶ್ನೆ ಕೇಳಿದ್ದೆ. ಅದಕ್ಕೆ 1-7-99 ರಲ್ಲಿ ನನಗೆ ಉತ್ತರ ಸಿಕ್ಕಿದೆ. ಒಟ್ಟು ಅಲ್ಲಿ ಐದು ಲಕ್ಷ 94 ಸಾವಿರ ಖರ್ಚಾಗಿದೆ, ಅದರಲ್ಲೂ ಸರ್ಕಾರ ನಾಲ್ಕು ಲಕ್ಷ